ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷ್ಣ ಮೇಲ್ದಂಡೆ ಯೋಜನೆಯ ಮುಳುಗಡೆ ಪರಿಹಾರ ಧನ ವಿತರಣೆ

5040 - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬಿಜಾಪುರ ಜಿಲ್ಲೆಯ ಕನಗೂರು ಮತ್ತು ಸಿರಬೂರ ಗ್ರಾಮಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ವ್ಯಾಪ್ತಿಯಲ್ಲಿ ಬರುತ್ತದೆಯೇ?*

2. *ಹಾಗಿದ್ದಲ್ಲಿ ಈ ಮುಳುಗಡೆ ಗ್ರಾಮಗಳ ಮನೆಗಳಿಗೆ ಸಹಕಾರ ಪರಿಹಾರಧನ ನೀಡಲಾಗಿದೆಯೇ?*

3. *ಈ ಪರಿಹಾರ ಧನವನ್ನು ಯಾವಾಗ ನೀಡಲಾಗುವುದು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1. ಕನಗೂರು ಮತ್ತು ಸಿರಬೂರು ಗ್ರಾಮಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ವ್ಯಾಪ್ತಿಯಲ್ಲಿ ಬರುತ್ತವೆ.

2. ಕನಗೂರು ಗ್ರಾಮದ ಕಟ್ಟಡಗಳ ಐತೀರ್ಪು ರಚನೆ ಕಾರ್ಯಪೂರ್ಣ ಮುಗಿದಿದ್ದು ಪರಿಹಾರ ಧನ ವಿತರಣೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ ಹಾಗೂ ಸಿರಬೂರು ಗ್ರಾಮದ ಕಟ್ಟಡಗಳ ಪರಿಹಾರಧನವನ್ನು ಈಗಾಗಲೇ ನೀಡಲಾಗಿದೆ.

3. ಮೇಲಿನಂತೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಸಹಾಯಧನ

5041 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98, 1998-99, 1999-2000ದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಸರಕಾರ ಕೊಟ್ಟ ಸಹಾಯ ಧನವೆಷ್ಟು? ಹಾಗೂ 2000-2001ರಲ್ಲಿ ನೀಡಲು ನಿಗಧಿ ಮಾಡಿದ ಸಹಾಯ ಧನವೆಷ್ಟು?*

ಆ) *ಈ ನಿಗಮಕ್ಕೆ ಒಂದು ಕೋಟಿಗಿಂತ ಹೆಚ್ಚು ಬಾಕಿ ಕೊಡಬೇಕಾಗಿರುವವರು ಯಾರು ಯಾರು ಹಾಗೂ ಎಷ್ಟು ಮೊತ್ತ?*

ಇ) *ಈ ನಿಗಮ 31.3.2000ಕ್ಕೆ ಹೊಂದಿರುವ ಹಾನಿ ಎಷ್ಟು?*

ಶ್ರೀ ವೀರಕುಮಾರ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಗ್ರಾಮೀಣ ವಿದ್ಯುತ್ ನಷ್ಟ ಸಹಾಯ ಧನ ಬಾಬ್ತು ನೀಡಿದ ವಿವರಗಳು ಈ ಕೆಳಕಂಡಂತಿದೆ.

1997-98	539.04 ಕೋಟಿ ರೂ.ಗಳು
1998-99	670.00 ಕೋಟಿ ರೂ.ಗಳು
1999-2000	768.91 ಕೋಟಿ ರೂ.ಗಳು

ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನ (2000-2001) ತನ್ನ ಆಯವ್ಯಯದಲ್ಲಿ ಗ್ರಾಮೀಣ ವಿದ್ಯುತ್ ನಷ್ಟ ಸಹಾಯ ಧನ ಬಾಬ್ತು 878.62 ಕೋಟಿ ರೂ.ಗಳನ್ನು ನಿಗದಿಪಡಿಸಿರುತ್ತದೆ.

ಆ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ದಿನಾಂಕ 30.6.2000ದ ಅಂತ್ಯಕ್ಕೆ ರೂ. ಒಂದು ಕೋಟಿಗಿಂತ ಹೆಚ್ಚು ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಬಳಕೆದಾರರಿಂದ ಬರಬೇಕಾಗಿರುವ ಒಟ್ಟು ಮೊತ್ತ 271.81 ಕೋಟಿ ರೂ.ಗಳು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ದಿನಾಂಕ 31.3.2000ಕ್ಕೆ ನಿಗಮವು ಹೊಂದಿರುವ ಒಟ್ಟು ನಷ್ಟವು ಸುಮಾರು 975 ಕೋಟಿ ರೂ.ಗಳು.

ಅನುಬಂಧ

ಕ್ರ. ಸಂ.	ಸ್ಥಾವರ ಸಂಖ್ಯೆ	ಗ್ರಾಹಕರ ಹೆಸರು ಮತ್ತು ವಿಳಾಸ	ಸ್ಥಾವರದ ಸ್ವರೂಪ	ದಿನಾಂಕ 30.6.2000ದ ಅಂತ್ಯಕ್ಕೆ ಇರುವ ಬಾಕಿ (ರೂ. ಲಕ್ಷಗಳಲ್ಲಿ)
ಬೆಂಗಳೂರು ವೃತ್ತ				
ಪೂರ್ವ ವಿಭಾಗ, ಬೆಂಗಳೂರು				
1.	ಇ4ಹೆಚ್‌ಟಿ-45	ಮೆ. ಬರೂಕಾ ಸ್ಟೀಲ್	ಕಬ್ಬಿಣ ಕಾರ್ಖಾನೆ	308.84
2.	ಇ4ಹೆಚ್‌ಟಿ-46	ಮೆ. ಆಂಧ್ರ ಸ್ಟೀಲ್	ಕಬ್ಬಿಣ ಕಾರ್ಖಾನೆ	125.03
3.	ಹೆಚ್‌ಟಿ-81	ಕ್ಯಾಪ್ ಸ್ಟೀಲ್ಸ್	-"-	122.93
4.	1ಇಹೆಚ್‌ಟಿ-4	ನಂದಿ ರೀ-ರೋಲಿಂಗ್ ಮಿಲ್	ರೋಲಿಂಗ್ ಮಿಲ್	177.95
ಉತ್ತರ ವಿಭಾಗ, ಬೆಂಗಳೂರು				
5.	ಎನ್ 4ಹೆಚ್‌ಟಿ-5	ಬೃಂದಾವನ್ ಅಲಾಯ್ಸ್	ಕಾರ್ಖಾನೆ	173.35

ಕ್ರ. ಸಂ.	ಸ್ಥಾವರ ಸಂಖ್ಯೆ	ಗ್ರಾಹಕರ ಹೆಸರು ಮತ್ತು ವಿಳಾಸ	ಸ್ಥಾವರದ ಸ್ವರೂಪ	ದಿನಾಂಕ 30.6.2000 ದ ಅಂತ್ಯಕ್ಕೆ ಇರುವ ಬಾಕಿ (ರೂ. ಲಕ್ಷಗಳಲ್ಲಿ)
ಗುಲ್ಬರ್ಗಾ ವಲಯ				
ಗುಲ್ಬರ್ಗಾ ವೃತ್ತ				
ಗುಲ್ಬರ್ಗಾ ವಿಭಾಗ				
6.	ಎಸ್‌ಹೆಚ್‌ಬಿಡಿ ಹೆಚ್‌ಟಿ-2	ಹೆಚ್.ಎಂ.ಪಿ. ಸಿಮೆಂಟ್, ಶಹಾಬಾದ್	ಸಿಮೆಂಟ್ ಕಾರ್ಖಾನೆ	1,241.99
ಬೀದರ್ ವಿಭಾಗ				
7.	ಹೆಚ್‌ಟಿಪಿ-5	ಸೌತ್ ಇಂಡಿಯಾ ಸಿಮೆಂಟ್	ಸಿಮೆಂಟ್ ಕಾರ್ಖಾನೆ	115.58
ಹೊಸಪೇಟೆ ವಿಭಾಗ				
8.	ವಿಹೆಚ್‌ಟಿ-2	ಸಂಡೂರ್ ಮ್ಯಾಂಗನೀಸ್ ಕಬ್ಬಿಣ ಅದಿರು ನಿಗಮ	ಕಾರ್ಖಾನೆ	1,955.04
9.	ವಿಹೆಚ್‌ಟಿ-3	ಸಂಡೂರ್ ಮ್ಯಾಂಗನೀಸ್ ಕಬ್ಬಿಣ ಅದಿರು ನಿಗಮ	-"-	9,082.28
		ಒಟ್ಟು ಮೊತ್ತ		**13,302.99**

ಟಿಪ್ಪಣಿ : 1. ಕ್ರಮಾಂಕ 3ರ ಸ್ಥಾವರವನ್ನು ಹೊರತುಪಡಿಸಿ ಉಳಿದ ಎಲ್ಲಾ ಸ್ಥಾವರಗಳ ವಿದ್ಯುತ್ ನಿಲುಗಡೆ ಮಾಡಲಾಗಿದೆ.

2. ಕ್ರಮಸಂಖ್ಯೆ 8 ಹಾಗೂ 9ರ ಸ್ಥಾವರಗಳ ವಿದ್ಯುತ್ ಬಾಕಿ ವಸೂಲಾತಿಗೆ ದಿನಾಂಕ 21.1.99ರ ಸರ್ಕಾರಿ ಆದೇಶದನ್ವಯ ಕ್ರಮ ತೆಗೆದುಕೊಳ್ಳಲಾಗಿದೆ.

ದಿನಾಂಕ 30.6.2000ದ ಅಂತ್ಯಕ್ಕೆ ರೂ. 1,00,00,000-00 ಮತ್ತು ಮೇಲ್ಪಟ್ಟು ವಿದ್ಯುತ್ ಬಾಕಿ ಬಳಸಿಕೊಂಡಿರುವ ರಾಜ್ಯ ಸರ್ಕಾರ/ರಾಜ್ಯ ಸರ್ಕಾರಿ ಸ್ವಾಮ್ಯದ ಸ್ಥಾವರಗಳ ವಿವರಣಾ ಪಟ್ಟಿ

ಕ್ರ. ಸಂ.	ಸ್ಥಾವರ ಸಂಖ್ಯೆ	ಗ್ರಾಹಕರ ಹೆಸರು ಮತ್ತು ವಿಳಾಸ	ಸ್ಥಾವರದ ಸ್ವರೂಪ	ದಿನಾಂಕ 30.6.2000 ದ ಅಂತ್ಯಕ್ಕೆ ಇರುವ ಬಾಕಿ (ರೂ. ಲಕ್ಷಗಳಲ್ಲಿ)
ಹುಬ್ಬಳ್ಳಿ ವಿಭಾಗ				
1.	ಹೆಚ್.ಟಿ.-3	ಮಹದೇವ ಟೆಕ್ಸ್‌ಟೈಲ್ಸ್ ಮಿಲ್ಸ್-ಹುಬ್ಬಳ್ಳಿ	ಟೆಕ್ಸ್‌ಟೈಲ್ಸ್	619.77
		ಒಟ್ಟು ಮೊತ್ತ		**619.77**

ಟಿಪ್ಪಣಿ : ಸದರಿ ಸ್ಥಾವರವು "ಸಿಕ್ ಇಂಡಸ್ಟ್ರಿ" ಆಗಿರುತ್ತದೆ

ದಿನಾಂಕ 30.6.2000ದ ಅಂತ್ಯಕ್ಕೆ ರೂ. 1,00,00,000-00 ಮತ್ತು ಮೇಲ್ಪಟ್ಟು ವಿದ್ಯುತ್ ಬಾಕಿ ಉಳಿಸಿಕೊಂಡಿರುವ ಕೇಂದ್ರ ಸರ್ಕಾರ/ಕೇಂದ್ರ ಸರ್ಕಾರ ಸ್ವಾಮ್ಯದ ಸ್ಥಾವರಗಳ ವಿವರಣಾ ಪಟ್ಟಿ

ಕ್ರ. ಸಂ.	ಸ್ಥಾವರ ಸಂಖ್ಯೆ	ಗ್ರಾಹಕರ ಹೆಸರು ಮತ್ತು ವಿಳಾಸ	ಸ್ಥಾವರದ ಸ್ವರೂಪ	ದಿನಾಂಕ 30.6.2000 ದ ಅಂತ್ಯಕ್ಕೆ ಇರುವ ಬಾಕಿ (ರೂ. ಲಕ್ಷಗಳಲ್ಲಿ)
ಬೆಂಗಳೂರು ಗ್ರಾಮೀಣ ವಲಯ				
ಕೆ.ಜಿ.ಎಫ್. ವಿಭಾಗ				
1.	ಹೆಚ್‌ಟಿ-1	ಭಾರತ್ ಗೋಲ್ಡ್ ಮೈನ್ಸ್ ಲಿ. ಕೆ.ಜಿ.ಎಫ್.	ಚಿನ್ನದ ಗಣಿ	5,465.05
ಶಿವಮೊಗ್ಗ ವೃತ್ತ				
ಶಿವಮೊಗ್ಗ ವಿಭಾಗ				
2.	ಡಿಸಿಹೆಚ್‌ಟಿ-1	ವಿ.ಐ.ಎಸ್.ಎಲ್. ನಿಯಮಿತ, ಭದ್ರಾವತಿ	ಕಬ್ಬಿಣ ಮತ್ತು ಉಕ್ಕು	2300.63
ಚಿಕ್ಕಮಗಳೂರು ಮತ್ತು ಮಂಗಳೂರು ವಿಭಾಗ				
3.	ಕೆಹೆಚ್‌ಟಿಪಿ-1	ಕುದುರೆಮುಖ ಕಬ್ಬಿಣ ಅದಿರು	ಕಬ್ಬಿಣ ಅದಿರು	1546.00
4.	ಹೆಚ್.ಟಿ.45	ಕುದುರೆಮುಖ ಕಬ್ಬಿಣ ಅದಿರು ಕಂಪನಿ ನಿಯಮಿತ	-"-	
ಪಾಂಡವಪುರ ವಿಭಾಗ				
5.	ಹೆಚ್.ಟಿ. 16	ಮಂಡ್ಯ ನ್ಯಾಷನಲ್ ಪೇಪರ್ ಮಿಲ್	ಪೇಪರ್ ಮಿಲ್	311.77
ಯಾದಗಿರ್ ವಿಭಾಗ				
6.	ಹೆಚ್.ಟಿ.ಪಿ.-1	ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ	ಸಿಮೆಂಟ್	403.47
			ಒಟ್ಟು ಮೊತ್ತ	**10,026.92**

ಟಿಪ್ಪಣಿ : 1. ಕ್ರಮ ಸಂಖ್ಯೆ 2ರ ವಿ.ಐ.ಎಸ್.ಎಲ್.ಗೆ ಸಂಬಂಧಿಸಿದಂತೆ ದಿನಾಂಕ 8.10.99ರ ಸರ್ಕಾರಿ ಆದೇಶದ ಪ್ರಕಾರ ಕ್ರಮತೆಗೆದುಕೊಂಡಿದ್ದು 30.9.2000ದ ಅಂತ್ಯಕ್ಕೆ ರೂ. 10.51 ಕೋಟಿ ಮಾತ್ರ ಬಾಕಿ ಉಳಿದಿರುತ್ತದೆ.

2. ಕ್ರಮ ಸಂಖ್ಯೆ 3 ಹಾಗೂ 4ಕ್ಕೆ ಸಂಬಂಧಿಸಿದಂತೆ, ಕಂಪನಿಯೊಂದಿಗೆ ಜಂಟಿ ಸಭೆಯಲ್ಲಿ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

ದಿನಾಂಕ 30.6.2000ದ ಅಂತ್ಯಕ್ಕೆ ರೂ. 1,00,00,000-00 ಮತ್ತು ಮೇಲ್ಪಟ್ಟು ವಿದ್ಯುತ್ ಬಾಕಿ ಉಳಿಸಿಕೊಂಡಿರುವ, ವಿವಿಧ ಮೇಲ್ಮನವಿ ಪ್ರಾಧಿಕಾರದಲ್ಲಿರುವ ಖಾಸಗಿ ಗ್ರಾಹಕರ ವಿವರಣಾ ಪಟ್ಟಿ

ಕ್ರ. ಸಂ.	ಸ್ಥಾವರ ಸಂಖ್ಯೆ	ಗ್ರಾಹಕರ ಹೆಸರು ಮತ್ತು ವಿಳಾಸ	ಸ್ಥಾವರದ ಸ್ವರೂಪ	ದಿನಾಂಕ 30.6.2000 ದ ಅಂತ್ಯಕ್ಕೆ ಇರುವ ಬಾಕಿ (ರೂ. ಲಕ್ಷಗಳಲ್ಲಿ)
ಗುಲ್ಬರ್ಗಾ ವಲಯ				
ಗುಲ್ಬರ್ಗಾ ವೃತ್ತ				
ಗುಲ್ಬರ್ಗಾ ವಿಭಾಗ				
1.	ಡಬ್ಲ್ಯೂಡಿ ಹೆಚ್‌ಟಿ-2	ಪ್ರಧಾನ ಪ್ರಬಂಧಕ, ಎಸಿಸಿ ವಾಡಿ	ಇಂಜಿನೀಯರಿಂಗ್	254.80

ದಿನಾಂಕ 30.6.2000ದ ಅಂತ್ಯಕ್ಕೆ ರೂ. 1,00,00,000.00 ಮತ್ತು ಮೇಲ್ಪಟ್ಟು ವಿದ್ಯುತ್ ಬಾಕಿ ಉಳಿಸಿಕೊಂಡು, ನ್ಯಾಯಾಲಯದಲ್ಲಿ ದಾವೆ ಹೂಡಿರುವ ಗ್ರಾಹಕರ ವಿವರಣಾ ಪಟ್ಟಿ

ಕ್ರ. ಸಂ.	ಸ್ಥಾವರ ಸಂಖ್ಯೆ	ಗ್ರಾಹಕರ ಹೆಸರು ಮತ್ತು ವಿಳಾಸ	ಸ್ಥಾವರದ ಸ್ವರೂಪ	ದಿನಾಂಕ 30.6.2000 ದ ಅಂತ್ಯಕ್ಕೆ ಇರುವ ಬಾಕಿ (ರೂ. ಲಕ್ಷಗಳಲ್ಲಿ)
ಮಂಗಳೂರು ವೃತ್ತ				
ಮಂಗಳೂರು ವಿಭಾಗ				
1.	ಹೆಚ್.ಟಿ.-7	ಎಂ.ಸಿ.ಎಫ್.	ಕಾರ್ಖಾನೆ	232.71
ಘಟಪ್ರಭಾ ವಿಭಾಗ				
2.	ಜಿ.ಪಿ.ಬಿ. ಹೆಚ್.ಟಿ.-3	ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರಿ ನಿಯಮಿತ	ವಿದ್ಯುತ್ ಸಹಕಾರಿ ಸಂಘ	2,063.74
ಜಮಖಂಡಿ ವಿಭಾಗ				
3.	ಎಂ.ಪಿ.-306	ಮೆ. ಶೇಷಾದ್ರಿ ಆಯಿಲ್ ಮಿಲ್	ಎಣ್ಣೆ ಗಿರಣಿ	125.31
ಬಳ್ಳಾರಿ ವಿಭಾಗ				
4.	ಇಹೆಚ್‌ಟಿ-2	ಬಿ.ಎಸ್.ಎ.ಎಲ್. ಬಳ್ಳಾರಿ	ಕಬ್ಬಿಣ ಕಾರ್ಖಾನೆ	555.22
		ಒಟ್ಟು ಮೊತ್ತ		**2,976.98**